ಮೈಸೂರು ಡಿಸ್ಟ್ರಿಕ್ಟ್.

ನಂ. 3. ತಾರೀಖು 25ನೇ ಏಪ್ರಿಲ್ 1887.

ಯಡತೊರೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನು ಕ್ರಮವಾದ ವಾರಸುದಾರರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಸ್ವಂದು ತಿಂಗಳು ಒಳಗಾಗಿ ಹಾಜರಾಗಿ ವಾಪಸ್ ಪಡೆಯ ಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಕಲಮಿನ ಮೇರೆಗೆ ನಾಶಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರು ಪಡಿಸಿದ ತಾರೀಖು.	ಪಡೆದು ಕೊಂಡು ಹೋದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
454 ——— 1884—85	ಮಿರ್ದೇ ಹೋಬಳಿ ಹೊಸಅಗ್ರಹಾರದಲ್ಲಿ ಯಿರುವ ಸ್ಮಾರ್ತ ಬ್ರಾಹ್ಮಣ ತಿಂಮಪ್ಪಯ್ಯನ ಮಗ ಕಪನೀಪಗ ಹನುಮೇಗೌಡ ತಯ್ಯ	ಸಾಲಿ ಗ್ರಾಮದ ಕಸಬೇಯಲ್ಲಿರುವ ಅಕ್ಕಂಣಿ ನ ಬೋರೇಗೌಡನ ಮಗ ಕೆಂಪೇಗೌಡ	18—8—84	19—8—84	(35) ರೂಪಾಯಿನ ಭೋಗ್ಯ ಪತ್ರ ಭೂಸ್ಥಿತಿಗೆ ಸಂಬಂಧಪಟ್ಟದ್ದು, 10 ವರುಷ ವಾಯಿದೆ.
619 ——— ಡಿಟೋ	ರಾಮನಾಥಪುರದಲ್ಲಿ ಯಿರುವ ಸಂಕೇತಿ ಬ್ರಾಹ್ಮಣ ಛತ್ರದ ಗೊಲ್ಲ ಚನ್ನಪ್ಪಯ್ಯ	ರಾಮನಾಥಪುರದಲ್ಲಿ ಯಿರುವ ಸಂಕೇತಿ ಬ್ರಾಹ್ಮಣ ಮೊಜಿ ಅಂಜೇ ಮುತ್ಸದ್ದಿ ರಾಮಂಣನವರ ಮಗ ಶ್ರೀನಿವಾಸಯ್ಯ	25—10—84	27—10—84	90 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಬಿ. ಕೆ. ವೆಂಕಟವರದಯ್ಯಂಗಾರ್,
ಅ|| ರಿಜಿಸ್ಟ್ರಾರ್.

ಪರೀಕ್ಷೆ.

ತಾರೀಖು 4ನೇ ಏಪ್ರಿಲ್ 1887.

1887ನೇ ಇಸವಿ ಜೂನ್ ಮಾಹೆಯಲ್ಲಿ ನಡಿಯುವ ಮೈಸೂರ್ ಲೋಕಲ್ ಸರ್ವಿಸ್ ವ ಪ್ಲೀಡರ್‌ಗಳ ಪರೀಕ್ಷೆ ವಿಷಯದಲ್ಲಿ—

ಇದರಿಂದ ಪ್ರಕಟಪಡಿಸುವದೇನಂದರೆ, ಅಸಿಸ್ಟೆಂಟ್ ಕಮ್ಮಿಷನರು, ಮುನ್ಸಿಫರು ಅಮಲ್ದಾರರು, ಡೆಪ್ಯುಟಿ ಅಮಲ್ದಾರರು ವ ಪ್ಲೀಡರುಗಳ ಉದ್ಯೋಗಕ್ಕಾಗಿ ವಿಧಿಸಲ್ಪಟ್ಟ ಪರೀಕ್ಷೆಗಳು, 1887ನೇ ಇಸವಿ ಜೂನ್ 13ನೇ ಮಂಗಳವಾರ ಮತ್ತು ಆ ವಾರನೇ ದಿವಸಗಳಲ್ಲಿ ಪ್ರತಿ ದಿವಸವೂ ಬೆಳಿಗ್ಗೆ 10½ ಘಂಟೆ ಲಾಗಾಯಿತು ಬೆಂಗಳೂರು ಮೊಕ್ತಾಂ ಪಟ್ಟಣ ಆಫೀಸಿನಲ್ಲಿಯ ಸೆಂಟ್ರಲ್ ಹಾಲ್‌ನಲ್ಲಿ ನಡಿಸಲ್ಪಡುವದು.

ಪರೀಕ್ಷೆಗಳು ಅಕ್ಷರಗಳಿಂದ ಗುರ್ತು ಮಾಡಲ್ಪಟ್ಟಿವೆ.

ಪ್ರತಿ ಪಾಠದ ಸವಾಲ್ ಪಟ್ಟಿಯು ಕೊಡುವ ತಾರೀಖು ವ ಘಂಟೆ ತೋರಿಸುವ ತಖ್ತೆಯು ಇದರಡೀ ಕಾಣಿಸಿರುತ್ತೆ. ಆಯಾ ಪರೀಕ್ಷೆಗೆ ಬರತಕ್ಕ ನರಖಾಸ್ತುದಾರರು ಆಯಾ ತಾರೀಖುಗಳಲ್ಲಿ ಹಾಜರಿರಬೇಕು.

ಅಸಿಸ್ಟೆಂಟ್ ಕಮ್ಮಿಷನರುಗಳ ಮೊಕರರಾತೀ ಬಗ್ಗೆ ಪರೀಕ್ಷೆ ..	A.
ಮುನ್ಸಿಫರ ಡಿಟೋ ಡಿಟೋ	B.
ಅಮಲ್ದಾರ್ ವ ಡೆಪ್ಯುಟಿ ಅಮಲ್ದಾರರ ಡಿಟೋ ಡಿಟೋ ..	C.
ಪ್ಲೀಡರುಗಳ .. ಡಿಟೋ ಡಿಟೋ ..	D.

ತಾರೀಖು.	ಘಂಟೆ.	ಪಾಠ.	ಪರಿಕ್ಷೆ.
ಸೋಮವಾರ, 13ನೇ ಜೂ 1887.	10 ರಿಂದ 12	ಲ್ಯಾಂಡ್ ಅಕ್ವಿಜಿಷ್ಷ ಆಕ್ಟು	A. C.
	12 „ 1½	ರಿಜಿಸ್ಟ್ರೇಷ್ಷ ಆಕ್ಟು	A. C. D.
	2 4	ಕ್ಯಾಟಲ್ ಟ್ರಿಸ್ಪೆಸ್ ಆಕ್ಟು, ಎಕ್ಸೈಸ್ ಆಕ್ಟು, ಓಪಿಯಂ ಆಕ್ಟು ..	A. C.
	4 „ 5½	ಸ್ಟ್ಯಾಂಪ್ ಮತ್ತು ಕೋರ್ಟು ಫೀಸ್ ಆಕ್ಟು	A. C. D.
ಮಂಗಳವಾರ, 14ನೇ ಜೂ 1887.	10½ „ 11½	ಫಾರೆಸ್ಟ್ ರೂಲ್ಸ್	A. C.
	11½ „ 2	ರೆವಿನ್ಯೂ ಮ್ಯಾನ್ಯುಯಲ್	A. C. D.
		ಸರ್ವೆ ಮ್ಯಾನ್ಯುಯಲ್	A. C.
	2½ „ 4½	ಸಿವಿಲ್ ಅಕ್ಕೌಂಟ್ಸ್ ಮತ್ತು ಫಿನಾನ್ಷಿಯಲ್ ಕೋಡುಗಳು ..	A. C.
ಬುಧವಾರ, 15ನೇ ಜೂ 1887.	10½ „ 2	ಇಂಡಿಯನ್ ಪಿನಲ್‌ಕೋಡ್	A. B. C. D.
	2½ „ 5½	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್	A. B. C. D.
ಗುರುವಾರ, 16ನೇ ಜೂ 1887.	10½ „ 1	ಟಾರ್ಟ್ಸ್	A. B. D.
	1½ „ 4	ಎವಿಡೆನ್ಸ್ ಆಕ್ಟು	A. B. C. D.
	4 „ 5	ಪೊಲೀಸ್ ರೂಲ್ಸ್	A. C.
ಶುಕ್ರವಾರ, 17ನೇ ಜೂ 1887.	10½ „ 1½	ಹಿಂದೂ ಲಾ	A. B. D.
	2 „ 5	ಮಹಮ್ಮದ್ ಲಾ	A. B. D.
ಶನಿವಾರ, 18ನೇ ಜೂ 1887.	10½ „ 1½	ಸ್ಪೆಸಿಫಿಕ್ ರಿಲೀಫ್ ಆಕ್ಟು	A. B. D.
	2 „ 5	ಸಿವಿಲ್ ಪ್ರೊಸಿಡ್ಯೂರ್ ಕೋಡ್	A. B. D.
ಸೋಮವಾರ, 20ನೇ ಜೂ 1887.	10½ „ 12½	ಮಾರ್ಟ್‌ಗೇಜ್ ಕಾರ್ನೂ	A. B. D.
	1 „ 3	ಲಿಮಿಟೇಷ್ಷ ಆಕ್ಟು	A. B. D.
	3 „ 5	ಕಂಟ್ರಾಕ್ಟ್ ಕಾರ್ನೂ	A. B. D
ಮಂಗಳವಾರ, 21ನೇ ಜೂ 1887.	10½ „ 12½	ವ್ಯವಹರಣೆ	D.

ಎಲ್. ಆನಂತಸ್ವಾಮಿ ರಾವ್,
ಸೆಕ್ರಟೇರಿ.